ಜಾತ: ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ ।
ಕೌರವಾಣಾಂ ವಿನಾಶಾಯ ದೈತ್ಯಾನಾಂ ನಿಧನಾಯ ಚ ।
ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ।
ಗೃಹಾಣಾರ್ಘ್ಯಂ ಮಯಾ ದತ್ತಂ ದೇವಕ್ಯಾ ಸಹಿತೋ ಹರೇ।
ದೇವಕೀ ಸಹಿತ ಶ್ರೀ ಕೃಷ್ಣಾಯನಮ: ।
ಇದಮರ್ಘ್ಯಂ ಇದಮರ್ಘ್ಯಂ ಇದಮರ್ಘ್ಯಂ ಸಮರ್ಪಯಾಮಿ ।
**(ಮೂರು ಸಾರಿ ಅರ್ಘ್ಯ ಕೊಡಬೇಕು)**

ಶ್ರೀ ಕೃಷ್ಣ ಜನಿಸಿದ್ದು ಕಂಸನ ವಧೆಗಾಗಿ ಮತ್ತು ಭೂಭಾರವನ್ನು ತಡೆಯಲು ಕೌರವರ ನಾಶಕ್ಕೆ ಮತ್ತು ದೈತ್ಯರ ಸಂಹಾರಕ್ಕೆ, ಪಾಂಡವರ ಹಿತಕ್ಕೆ ಮತ್ತು ಧರ್ಮಸಂಸ್ಥಾಪನೆಗೆ. ಅಂತಹ ಶ್ರೀಕೃಷ್ಣನಿಗೆ ಅರ್ಘ್ಯವನ್ನು ಕೊಡಬೇಕು.

ಜಾತಕಂಸವಧಾರ್ಥಾಯ – ಜನಿಸಿದ್ದೇ ಕಂಸನ ವಧೆಗಾಗಿ – ಕಂಸ ಕಾಲನೇಮಿ ಎಂಬ ರಾಕ್ಷಸನ ಅವತಾರ. ಅವನು ಮಹಾದುಷ್ಟ. ತನ್ನ ತಾಯಿಯ ಸಹೋದರ. ಅವನು ತನ್ನ ಸ್ವಾರ್ಥಕ್ಕಾಗಿ, ರಾಜ್ಯದ ಆಸೆಯಿಂದ ತನ್ನ ಒಡ ಹುಟ್ಟಿದ ತಂಗಿಯನ್ನೇ ಕೊಲ್ಲಲು ಉದ್ಯುಕ್ತನಾಗಿರುತ್ತಾನೆ. ಅಂತಹ ಕಂಸನ ಸಂಹಾರಕ್ಕಾಗಿಯೇ ಶ್ರೀಕೃಷ್ಣ ಜನಿಸಿದ್ದು.

ಭೂಭಾರೋತ್ತಾರಣಾಯ ಚ – ಭೂದೇವಿ ತನ್ನ ಮೇಲೆ ಹಲವಾರು ಅಸುರರು ಬಂದು ಆಕ್ರಮಣ ಮಾಡಿಸಿ ಪರಮಾತ್ಮನನ್ನು ದ್ವೇಷಿಸುವುದನ್ನು ಸಹಿಸದೆ, ಪರಮ ಪವಿತ್ರೆಯೂ, ಪತಿವ್ರತೆಯೂ ಆದ ಅವಳು ಪರಮಾತ್ಮನಲ್ಲಿ ಗೋವಿನ ರೂಪದಲ್ಲಿ ಹೋಗಿ ಮೊರೆಯಿಡುತ್ತಾಳೆ, ಭೂಭಾರವನ್ನು ಇಳಿಸಲು. ಆದ್ದರಿಂದ ಪರಮಾತ್ಮನು ಅವತರಿಸಿದನು.

ಕೌರವಾಣಾಂ ವಿನಾಶಾಯ – ದುರ್ಯೋಧನಾದಿಗಳು ಪಾಂಡವರಿಗೆ ಕೊಟ್ಟ ಕಷ್ಟ ಅಷ್ಟಿಷ್ಟಲ್ಲ. ಅವರನ್ನು ದ್ಯೂತಕ್ಕೆ ಎಳೆದು ಶಕುನಿಯ ಮೂಲಕ ಕುತಂತ್ರದಿಂದ ಸೋಲಿಸಿ, ದ್ರೌಪದಿಯ ಸೀರೆ ಎಳೆದಾಗ ಶ್ರೀಕೃಷ್ಣನೇ ಅವಳನ್ನು ಸಂರಕ್ಷಿಸಿದ್ದು. ಕೌರವರು ಪಾಂಡವರನ್ನು ಕಾಡಿಗೆ ಅಟ್ಟಿ, ೧೨ ವರ್ಷ ವನವಾಸ, ೧ ವರ್ಷ ಅಜ್ಞಾತವಾಸ ಮಾಡುವಂತೆ ಮಾಡಿ, ಅದೆಲ್ಲವನ್ನೂ ಮುಗಿಸಿಕೊಂಡು ಬಂದು ತಮ್ಮ ರಾಜ್ಯವನ್ನು ಮತ್ತೆ ಕೇಳಿದರೆ, ಏನನ್ನೂ ಕೊಡದಿದ್ದಾಗ ಶ್ರೀಕೃಷ್ಣನು ದೂತನಾಗಿ ಹೋದರೆ, ಅವನಿಗೂ ಬೆಲೆ ಕೊಡಲಿಲ್ಲ ಆ ದುಷ್ಟಕೌರವರು. ಕಡೆಗೆ ತಮ್ಮ ಸೋದರತ್ತೆಯ ಮಕ್ಕಳಾದ **ಪಾಂಡವಾನಾಂ**

**ಹಿತಾರ್ಥಾಯ** ಪಾಂಡವರ ಹಿತಕ್ಕಾಗಿ ಅರ್ಜುನನ ಸಾರಥಿಯಾಗಿ ನಿಂತು, ತಾನು ಶಸ್ತ್ರವನ್ನು ಹಿಡಿಯದೇ, ಇಡೀ ಕೌರವರನ್ನು ನಾಶಗೊಳಿಸಲು, ಅರ್ಜುನನ ನೆಪಮಾಡಿಕೊಂಡು ಭಗವದ್ಗೀತೆಯನ್ನು ಉಪದೇಶಿಸಿ, ಮಹಾಭಾರತ ಯುದ್ಧದಲ್ಲಿ ಎಲ್ಲವನ್ನು ತಾನೇ ಮಾಡಿ, ಭೀಷ್ಮಾಚಾರ್ಯರಲ್ಲಿ ನಿಂತು ವಿಷ್ಣುಸಹಸ್ರನಾಮವನ್ನು ಧರ್ಮರಾಜನಿಗೆ ಉಪದೇಶಿಸಿದ ಮಹಾನುಭಾವ ಶ್ರೀ ಕೃಷ್ಣ.

ದೈತ್ಯಾನಾಂ ನಿಧನಾಯ – ತಾನು ಜನಿಸಿದ ಕೆಲವೇ ದಿನಗಳಲ್ಲಿ ಕಂಸನ ಭೃತ್ಯಳಾದ ಪೂತನಿಯ ಮೊಲೆ ಹಾಲು ಉಣ್ಣುವ ನೆಪದಲ್ಲಿ ಅವಳನ್ನು ಸಂಹರಿಸಿ, ಪೂತನಾಜೀವಿತಹರನಾಗಿ, ಬಂಡೀರೂಪದಿಂದ ಬಂದ ಶಕಟಾಸುರನನ್ನು ತನ್ನ ಮುದ್ದಾದ ಕಾಲುಗಳಿಂದ ಸ್ಪರ್ಷ ಮಾತ್ರದಿಂದಲೇ ಸಂಹರಿಸಿ ಶಕಟಾಸುರಮರ್ಧನನಾಗಿ, ಸುಂಟರಗಾಳಿಯ ರೂಪದಿಂದ ಬಂದ ತೃಣಾವರ್ತನೆಂಬ ದೈತ್ಯನು ಕೃಷ್ಣನನ್ನು ಆಕಾಶದೆತ್ತರಕ್ಕೆ ಎತ್ತಿಕೊಂಡು ಹೋಗಲು, ಅಲ್ಲಿ ಸಣ್ಣ ಕೂಸಾದ ಕೃಷ್ಣನು ಅತ್ಯಂತ ಭಾರವನ್ನು ತೋರಿಸಲು, ಆ ಭಾರವನ್ನು ತಡೆಯಲು ಅಶಕ್ಯನಾಗಿ, ಬಂಡೆಯನ್ನೆತ್ತಿದಂತೆ ಅನಿಸಿತು ಆ ದೈತ್ಯನಿಗೆ. ಆಗ ಆ ದೈತ್ಯನನ್ನು ಶ್ರೀಕೃಷ್ಣನು ಕೆಳಗೆ ತಳ್ಳಿದಾಗ ಅವನು ಘೋರವಾದ ರೂಪವನ್ನು ಹೊಂದಿ ಸತ್ತನು. ಇದೇರೀತಿ ತೃಣೀಕೃತನನ್ನೂ, ಯಮಳಾರ್ಜುನನನ್ನೂ ಸಂಹಾರಮಾಡಿ, ತೃಣೀಕೃತ ತೃಣಾವರ್ತ ಯಮಳಾರ್ಜುನ ಭಂಜನನಾದನು. ಕುಬೇರನ ಮಕ್ಕಳಾದ ನಲಕೂಬರ–ಮಣಿಗ್ರೀವರ ಶಾಪವಿಮೋಚನ ಮಾಡಿದನು. ವೃಂದಾವನದಲ್ಲಿ ಗೋರೂಪದಿಂದ ಬಂದ ವತ್ಸಾಸುರನನ್ನು ಹಿಡಿದು ಕೊಂದು, ಬಕಾಸುರನು ಬಕನ ರೂಪದಲ್ಲಿ ಬರಲು ಅವನನ್ನೂ ಸಂಹರಿಸಿದನು. ಕತ್ತೆ ರೂಪದಿಂದ ಬಂದ ಧೇನುಕಾಸುರನನ್ನು ಸಂಹರಿಸಿದನು. ಕಾಳಿಂದಿಯ ಮಡುವಿನಲ್ಲಿ ಕಾಳಿಯನಿಂದ ಕೆಟ್ಟಿದೆ ಎಂದು ತಿಳಿದು, ಅವನ ದುರಹಂಕಾರವನ್ನು ಮಣಿಸಿ ಅವನ ಹೆಡೆಯ ಮೇಲೆ ನರ್ತಿಸಿ, ಕಾಳೀಯಮರ್ದನ ಕೃಷ್ಣನಾದನು. 'ಗೋಪ'ವೇಶದಿಂದ ಬಂದ ಪ್ರಲಂಬಾಸುರನು ಬಲರಾಮನನ್ನು ಹೊತ್ತು ಹಾರತೊಡಗಲು, ಬಲರಾಮನು ತನ್ನ ಮೂಲರೂಪವಾದ ಶೇಷನನ್ನು ಸ್ಮರಿಸಲು, ಕೃಷ್ಣನನ್ನು ಸ್ಮರಿಸಲು, ಹೆಚ್ಚು ಶಕ್ತಿವಂತನಾಗಿ ಆ ಪ್ರಲಂಬಾಸುರನನ್ನು ಕೊಂದನು. ಕೃಷ್ಣನು ಶಂಖಚೂಡನನ್ನು ಕೊಂದನು. ಒಮ್ಮೆ ಆಕಳುಗಳನ್ನು ಮೇಯುತ್ತ ಹೋಗಿದ್ದಾಗ, ಭಾರೀ ದಾವಾಗ್ನಿ ಉಂಟಾಗಲು, ಇಡೀ ದಾವಾಗ್ನಿಯನ್ನೇ ಪಾನಮಾಡಿ ಶಾಂತಗೊಳಿಸಿದನು. ಗೋಪಿಕೆಯರನ್ನು ಅನುಗ್ರಹಿಸಿ, ಅವರು ಮಾಡುತ್ತಿದ್ದ ಕಾತ್ಯಾಯಿನಿ ವ್ರತಕ್ಕಾಗಿ ಮಾಡಿದ್ದ ಅಡಿಗೆಯನ್ನು ತನ್ನ ಸ್ನೇಹಿತರೊಂದಿಗೆ ಸ್ವೀಕರಿಸಿ, ಅವರನ್ನು ಅನುಗ್ರಹಿಸಿದನು.

**ಗೋವರ್ಧನಧಾರಿ** – ಶ್ರೀಕೃಷ್ಣನು ಒಮ್ಮೆ ವೃಂದಾವನದಲ್ಲಿ ನಂದಾದಿಗಳು ಪರ್ಜನ್ಯನಾದ ಇಂದ್ರನನ್ನು ಪೂಜಿಸುತ್ತಿರಲು, ನೀವು ಪರ್ಜನ್ಯನ ಪೂಜೆಗಿಂತ ಶ್ರೇಷ್ಟವಾದ ಗೋವರ್ಧನಗಿರಿಯನ್ನೇ ಪೂಜಿಸಿ ಎನ್ನಲು ಇಂದ್ರನು ಕೋಪಗೊಂಡು ಅತ್ಯಂತ ಹೆಚ್ಚಾದ ಮಳೆಯನ್ನು ಸತತ ನೀಡಲು ಶ್ರೀಕೃಷ್ಣನು ಇಡೀ ಗೋವರ್ಧನಗಿರಿಯನ್ನೇ ತನ್ನ ಕಿರುಬೆರಳಿನಲ್ಲಿ ಎತ್ತಿ, ಅಷ್ಟೂ ಜನರನ್ನು ಸಂರಕ್ಷಿಸಿ ಗೋವರ್ಧನಧಾರಿಯಾದನು. ಕಡೆಗೆ ಇಂದ್ರನು ತನ್ನ ತಪ್ಪಿನ ಅರಿವಾಗಿ ಕೃಷ್ಣನನ್ನು ಶರಣಾಗತನಾದನು.

**ನಂದನ ವರುಣಪಾಶಮೋಚನ** – ಒಮ್ಮೆ ದ್ವಾದಶಿಯ ಬೆಳಗಿನಜಾವ ನಿಶೀಥ ಸಮಯದಲ್ಲಿ ನಂದಗೋಪನು ಸ್ನಾನಕ್ಕೆ ಯಮುನೆಗೆ ಹೋದನು. ಆಗ ಅಲ್ಲಿದ್ದ ವರುಣಭೃತ್ಯರು ನಂದನ್ನು ಪಿಡಿದು ವರುಣಲೋಕಕ್ಕೆ ಎಳೆದೊಯ್ಯಲು, ವರುಣಲೋಕಕ್ಕೆ ಹೋಗಿ ತನ್ನ ತಂದೆಯನ್ನು ಕರೆತಂದನು. ಕಂಸನ ಭೃತ್ಯನಾದ ವೃಷಭಾಕಾರನಾದ ಅರಿಷ್ಟಾಸುರನನ್ನು ಸಂಹರಿಸಿದನು. ಗೋಪಿಕೆಯರೊಡನೆ ರಾಸಕ್ರೀಡೆಯನ್ನಾಡಿ, ಗೋಪಿಕಾಮನೋಹರನಾದನು. ಶ್ರೀಕೃಷ್ಣನು ಸ್ವರಮಣ. ಅವನಿಗೆ ಲಕ್ಷ್ಮೀದೇವಿಯಿಂದಲೂ ಸುಖವೆಂಬುದಿಲ್ಲ. ಅಂತಹ ಪರಮಾತ್ಮನು ಆ ಗೋಪಿಕೆಯರಿಗೆಲ್ಲ ಸುಖವನ್ನು ನೀಡಿ ರಮಿಸಿದನು. ಇಲ್ಲಿ ನಮಗೆ ಒಂದು ಅನುಮಾನ ಬರಬಹುದು ಅನ್ಯಸ್ತ್ರೀಯರೊಂದಿಗೆ ರಮಿಸುವುದು ತಪ್ಪಲ್ಲವೇ? ಆದರೆ ನಾವು ಸತಿ–ಪತಿಯರು ರಮಣಕಾಲದಲ್ಲಿ ಎಲ್ಲವನ್ನೂ ಪರಮಾತ್ಮನಿಗೆ ಸಮರ್ಪಣ ಮಾಡಬೇಕಾಗಿರುವುದರಿಂದ, ಪರಮಾತ್ಮನೇ ಬಂದಿರುವುದರಿಂದ ತಪ್ಪಲ್ಲ. ಅದು ದೋಷವಲ್ಲ.

**ಕಂಸನ ವಧೆಗೆ ಆಗಮನ** – ಕಂಸನು ಬಲರಾಮ–ಕೃಷ್ಣರು ವಸುದೇವನ ಪುತ್ರರು ಎಂದು ತಿಳಿದು, ಅವರನ್ನು ಅಕ್ರೂರನ ಮೂಲಕ ಕರೆಸಿಕೊಂಡು ಕೊಲ್ಲಲು ಹವಣಿಸಿದನು. ಗೋಪಿಕೆಯರೊಂದಿಗೆ ಇದ್ದ ಶ್ರೀಕೃಷ್ಣನು ಗೋಪಿಕೆಯರಿಗೆ ವಿರಹ ವೇದನೆಯನ್ನು ನೀಡಿ, ವೃಂದಾವನ ಬಿಟ್ಟು ಕಂಸನ ಪುರಿ ಮಧುರಾನಗರಕ್ಕೆ ತೆರಳಿದನು. ಕಂಸನ ರಜಕನು ಅರಮನೆಯ ಉತ್ತಮ ಬಟ್ಟೆ ವಸ್ತ್ರಗಳನ್ನು ಹೊತ್ತುಕೊಂಡು ಹೋಗುತ್ತಿರುವುದನ್ನು ಗಮನಿಸಿದ ಕೃಷ್ಣನು ತನಗೆ ವಸ್ತ್ರಗಳನ್ನು ಕೊಡಲು ಕೇಳಿದಾಗ ದುರಹಂಕಾರಿಯಾದ ಆ ರಜಕನು ಕೊಡದಿರಲು ಅವನನ್ನು ಸಂಹರಿಸಿ, ತನಗೆ ಬೇಕಾದ ಬಟ್ಟೆಗಳನ್ನು ಧರಿಸಿದರು ರಾಮ–ಕೃಷ್ಣರು. ದಾರಿಯಲ್ಲಿ ಸುಗಂಧಪಾತ್ರೆಯನ್ನು ಹಿಡುದುಬರುತ್ತಿದ್ದ ಒಬ್ಬ ತ್ರಿವಕ್ರೆ ಎಂಬ ಕುಬ್ಜೆಗೆ ಅವಳು ನೀಡಿದ ಸುಗಂಧದ್ರವ್ಯವನ್ನು ಸ್ವೀಕರಿಸಿ, ಅವಳನ್ನು ಸುಂದರ ಸ್ತ್ರೀಯಾಗಿಸಿದನು. ಮತ್ತು ಮುಂದೆ ಕಂಸ ಸಂಹಾರಾ ನಂತರ ಅವಳಿಗೆ ಅಂಗ

ಸುಖವನ್ನಿತ್ತನು. ಮುಷ್ಟಿಕಾಸುರ, ಶಲತೋಶಲಾದಿ ಮಲ್ಲರನ್ನೂ, ಸಂಹರಿಸಿದನು, ಕೇಶೀ ನಾಮಕ ದೈತ್ಯನನ್ನು ಸಂಹರಿಸಿ ಕೇಶವನಾದನು. ಕಾಲಯವನನನ್ನೂ, ಸಂಹರಿಸಿದನು. ಕುವಲಯಾಪೀಡನೆಂಬ ದುಷ್ಟ ಗಜರೂಪಿ ದೈತ್ಯನನ್ನೂ ಕೊಂದನು ನಂತರ ಕಂಸನ ಪುರಕ್ಕೆ ತೆರಳಿ ಅವನನ್ನೂ ಸಿಂಹಾಸನದಿಂದ ಕೆಳಗೆ ತಳ್ಳಿ ಸಂಹರಿಸಿದನು ಮತ್ತು ಕಂಸಾರಿಯಾದನು. ನಂತರ ಬಂದ ಕಂಸನ ಎಂಟು ಮಂದಿ ತಮ್ಮಂದಿರನ್ನೂ, ಬಲರಾಮನು ಕೊಂದನು.

ನಂತರ ವಸುದೇವ ದೇವಕಿಯರು ಶ್ರೀಕೃಷ್ಣಪರಮಾತ್ಮ–ಬಲರಾಮರಿಗೆ ಉಪನಯನವನ್ನು ಮಾಡಿ ಗುರು ಸಾಂದೀಪಿನಾಚಾರ್ಯರ ಬಳಿ ವಿದ್ಯಾಭ್ಯಾಸಕ್ಕೆ ಗುರುಕುಲಕ್ಕೆ ಕಳುಹಿದರು. ೬೪ ವಿದ್ಯೆಗಳನ್ನೂ ಕಲಿತ ಮೇಲೆ ಗುರುಗಳಿಗೆ ಗುರುಕಾಣಿಕೆಯನ್ನು ಕೊಡಬೇಕೆಂದು, **ಅವರ ಮೃತಪುತ್ರನನ್ನು ಒಬ್ಬ** ಶಂಖರೂಪಿಯಾದ ಪಂಚಜನನೆಂಬ ರಾಕ್ಷಸ ಅಪಹರಿಸಿ ನೀರಿನಲ್ಲಿಟ್ಟಿದ್ದನು. ಅವನನ್ನು ಸಂಹರಿಸಿ ಗುರುಪುತ್ರನನ್ನು ತಮ್ಮ ಗುರುಗಳಿಗೆ ಒಪ್ಪಿಸಿ ಗುರುಕಾಣಿಕೆ ನೀಡಿ ಪಾಂಚಜನ್ಯವನ್ನು ತಾನು ಹೊಂದಿದನು. ಮಗಧರಾಜನಾದ ಜರಾಸಂಧನು, ತನ್ನ ಪುತ್ರಿಯರು ವಿಧವೆಯರಾಗಲು (ಕಂಸನ ಮಡದಿಯರಾದ ಅಸ್ಥಿ ಮತ್ತು ಪಾಸ್ತಿ. ಇವರನ್ನು ಕಂಸನು ಅಪಹರಿಸಿ ಮದುವೆಯಾಗಿರುತ್ತಾನೆ. ಆದರೂ ಅವರನ್ನು ಕ್ಷಮಿಸಿರುತ್ತಾನೆ ಜರಾಸಂಧ) ಕೃಷ್ಣನ ಮೇಲೆ ಕೋಪದಿಂದ ತನ್ನ ೨೩ ಅಕ್ಷೋಹಿಣಿ ಸೈನ್ಯವನ್ನು ತೆಗೆದುಕೊಂಡು ೧೮ ಬಾರಿ ಯುದ್ಧ ಮಾಡುತ್ತಾನೆ. ಆದರೆ ಪ್ರತಿಸಲವೂ ಸೋಲುತ್ತಾನೆ. ಇವನಿಗೆ ಬಲಿಪುತ್ರ ಬಾಣನೂ ಸಹಾಯ ಮಾಡುತ್ತಾನೆ ಅವರೆಲ್ಲರನ್ನೂ ಬಲರಾಮ–ಕೃಷ್ಣರು ಸೋಲಿಸುತ್ತಾರೆ. ಮುಚುಕುಂದ ಮಹಾರಾಜನನ್ನು ಉದ್ಧಾರ ಮಾಡಲಿಕ್ಕಾಗಿ, ಮುಚುಕುಂದ ಮಹಾರಾಜನಿಂದಲೇ ಕಾಲಯವನನ್ನು ಸಂಹಾರ ಮಾಡಿಸುತ್ತಾನೆ. ರೇವತ ರಾಜನ ಮಗಳಾದ ರೇವತಿಯನ್ನು ಬಲರಾಮ ವಿವಾಹವಾಗುತ್ತಾನೆ. ರುಕ್ಮಿಣೀದೇವಿ ತನ್ನನ್ನು ವಿವಾಹವಾಗುವಂತೆ ಶ್ರೀಕೃಷ್ಣಪರಮಾತ್ಮನಿಗೆ ಪತ್ರವನ್ನು ಬರೆಯುತ್ತಾಳೆ. ಜರಾಸಂಧನಾದರೋ ರುಕ್ಮಿಯನ್ನು ಒಪ್ಪಿಸಿ ರುಕ್ಮಿಣಿಯನ್ನು ಶಿಶುಪಾಲನಿಗೆ ಮದುವೆ ಮಾಡಿಸಲು ನಿಶ್ಚಯಿಸಿರುತ್ತಾನೆ. ಅಂತಹ ರುಕ್ಮಿಣಿಯನ್ನು ಮಂದಸ್ಮಿತನಾದ ಶ್ರೀಕೃಷ್ಣನು ಅಪಹರಿಸಿ ವಿವಾಹವಾಗುತ್ತಾನೆ.

ನಂತರ ಸತ್ರಾಜಿತನಿಗೆ ಸ್ಯಮಂತಕಮಣಿಯನ್ನು ಹುಡುಕಿಕೊಟ್ಟು ಅವನ ಪುತ್ರಿಯಾದ ಸತ್ಯಭಾಮಾದೇವಿಯನ್ನು ವಿವಾಹವಾಗುತ್ತಾನೆ. ಸ್ಯಮಂತಕಮಣಿಯ ಅನ್ವೇಷಣೆಯಲ್ಲಿ **ಯುದ್ಧಕ್ಕೆ ಬಂದ ಜಾಂಬವಂತನನ್ನು ಮಣಿಸಿ,** ತನ್ನ **ರಾಮಚಂದ್ರ** ರೂಪವನ್ನು ತೋರಿಸಿ, ಅವನ ಮಗಳಾದ ಜಾಂಭವತೀದೇವಿಯನ್ನು ವಿವಾಹವಾಗುತ್ತಾನೆ. ಕಾಳಿಂದೀ, ನೀಲಾ, ಮಿತ್ರವಿಂದಾ, ಭದ್ರಾ ಮತ್ತು ಲಕ್ಷಣಾದೇವಿಯರನ್ನೂ ವಿವಾಹವಾಗುತ್ತಾನೆ. ಮುರಾಸುರನನ್ನೂ, ನರಕಾಸುರನನ್ನೂ ಸಂಹರಿಸಿ, ೧೬೧೦೦ ಅಗ್ನಿಪುತ್ರರು ತನಗಾಗಿ ಹೆಣ್ಣಾಗಿ ಅವತರಿಸಿದ

ಗೋಪಿಕಾಸ್ತ್ರೀಯರನ್ನು ವಿವಾಹವಾದನು. ಸತ್ಯಭಾಮಾ ದೇವಿಯು ಪಾರಿಜಾತ ಹೂ ಬೇಕೆನ್ನಲು, ಸ್ವರ್ಗಲೋಕದಲ್ಲಿದ್ದ ಇಂದ್ರಾದಿ ದೇವಾದಿಗಳೊಂದಿಗೆ ಸತ್ಯಭಾಮಾ ಸಹಿತನಾಗಿ ಶ್ರೀಕೃಷ್ಣನು ಯುದ್ಧಮಾಡಿ ಪಾರಿಜಾತಾಪಹರಣ ಮಾಡಿದನು. ಪೌಂಡ್ರಕವಾಸುದೇವನನ್ನೂ, ಶಂಬರಾಸುರನನ್ನೂ ಸಂಹರಿಸಿದನು. ಭೀಮಸೇನದೇವರಿಂದ ಜರಾಸಂಧನನ್ನು ಸಂಹರಿಸಿದನು. ಪಾಂಡವರ ರಾಜಸೂಯ ಯಾಗದಲ್ಲಿ ಶಿಶುಪಾಲನನ್ನು ಸಂಹರಿಸಿದನು, ಸಾಲ್ವನನ್ನು ಸಂಹರಿಸಿದನು.